# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| **¸A¥ÄI -155**<br>**Volume - 155** | **ಬೆಂಗಳೂರು, ಗುರುವಾರ ,16, ಏಪ್ರಿಲ್, 2020 (ಚೈತ್ರಾ, 27, ಶಕವರ್ಷ ೧೯೪2)**<br>**Bengaluru, THURSDAY, 16, APRIL, 2020(Chaithra, 27, ShakaVarsha 1942)** | **¸AaP 16**<br>**Issue 16** |
|---|---|---|

## ¨ÁU 3

## ¸ÀPÁðgÀzÀ DAiÀiÁ E¯ÁSÉUÀ¼À ªÀÄÄRå¸ÀgÀ ªÀÄvÀÄÛ ¸Á½ÃAiÀÄ ¥ÁæPÁjUÀ½UÉ ¸ÀA§A¢¹zÀ C¢ü¸ÀÆZÀ£ÉUÀ¼ÀÄ

**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 67 ಎಂಎಲ್ಆರ್ 2017

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 13.04.2020.

**ಅಧಿಸೂಚನೆ**

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 9, 349 ಮತ್ತು 355(ಬಿ) ಪ್ರಕರಣದಲ್ಲಿ ಸ್ಪಷ್ಟಪಡಿಸಿದಂತೆ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ 'ಗ್ರಾಮ ಪಂಚಾಯತಿ ಪ್ರದೇಶ'ವನ್ನು ಅಜ್ಜಂಪುರ 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು ಅಜ್ಜಂಪುರ ಪಟ್ಟಣ ಪಂಚಾಯಿತಿ'ಯ ಪ್ರದೇಶವೆಂದು ನಿರ್ದಿಷ್ಟಪಡಿಸಲು ಉದ್ದೇಶಿಸಿ, ಅಧಿಸೂಚನೆ ಸಂಖ್ಯೆ ನಅಇ 67 ಎಂಎಲ್ಆರ್ 2017, ದಿನಾಂಕ:09.12.2019ನ್ನು ದಿನಾಂಕ:09.12.2019ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3ರ ಸಂಖ್ಯೆ:1045ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿ;

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು /ಸಲಹೆಗಳು ಸ್ವೀಕೃತವಾಗಿರುವುದಿಲ್ಲವಾದ್ದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 3ನೇ ಪ್ರಕರಣದೊಂದಿಗೆ ಓದಿಕೊಂಡ 9, 349 ಮತ್ತು 355(ಬಿ)ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಗೌರವಾನ್ವಿತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ,

'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ' ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ಗ್ರಾಮ ಪಂಚಾಯತಿ

ಪ್ರದೇಶ'ವನ್ನು ಅಜ್ಜಂಪುರ 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು 'ಅಜ್ಜಂಪುರ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ.

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು; 11372
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕುನೂರು ಕಡಿಮೆಯಿಲ್ಲದ ಹೊರತು; 419
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು; 70%.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎ. ವಿಜಯಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಸಂಖ್ಯೆ:ನಅಇ 67 ಎಂಎಲ್‌ಆರ್ 2017

**ಶೆಡ್ಯೂಲ್ – ಎ**

| ಜಿಲ್ಲೆಯ ಹೆಸರು | ತಾಲ್ಲೂಕು | ಮೇಲ್ದರ್ಜೆಗೇರಿಸಲಾಗುವ ಗ್ರಾಮ ಪಂಚಾಯಿತಿ ಹೆಸರು | ಮೇಲ್ದರ್ಜೆಗೇರಿಸಿದ ನಂತರ ಒಟ್ಟಾರೆ ಪರಿಗಣಿಸಲ್ಪಡುವ ಪ್ರದೇಶ (ಏರಿಯಾ) (ಚ.ಕಿ.ಮೀ.) |
|---|---|---|---|
| ಚಿಕ್ಕಮಗಳೂರು | ಅಜ್ಜಂಪುರ | ಅಜ್ಜಂಪುರ ಗ್ರಾಮ ಪಂಚಾಯಿತಿ | 27.13 ಚ.ಕಿ.ಮೀ. |

**ಶೆಡ್ಯೂಲ್ – ಬಿ**

ಪೂರ್ವಕ್ಕೆ: ಗೌರಾಪೂರ ಮತ್ತು ಹೆಬ್ಬೂರು ಗ್ರಾಮ

ಪಶ್ಚಿಮಕ್ಕೆ: ಅತ್ತಿಮೊಗ್ಗೆ ಮತ್ತು ಹಣ್ಣೆ ಗ್ರಾಮ

ಉತ್ತರಕ್ಕೆ: ಎರೆ ಹೊಸೂರು ಮತ್ತು ಗೆಜ್ಜೆಗೊಂಡನಹಳ್ಳಿ ಗ್ರಾಮ

ದಕ್ಷಿಣಕ್ಕೆ: ಮಲ್ಲೇನಹಳ್ಳಿ ಗ್ರಾಮ

**GOVERNMENT OF KARNATAKA**

No.UDD 67 MLR 2017

Karnataka Government Secretariat
Vikasasoudha
Bangalore, Dated:13.04.2020.

**NOTIFICATION**

Whereas the notification of declaring the 'Grama Panchayat Area' of Ajjampura as Transitional area of Ajjampura in Chickamagaluru District mentioned in Schedule "A" along with boundaries mentioned in Schedule "B" is hereby declared as the "Transitional Area" of Ajjampura and further such area is specified as "Town Panchayat Area" of Ajjampura was published as required by Section 9, 349 and 355(B) of the Karnataka Municipalities Act 1964, vide Government notification No:UDD 67 MLR 2017, dated:09.12.2019 by providing thirty days time and was published in part-III, No.1045, Karnataka Gazette Extraordinary, dated:09.12.2019 inviting objections from all persons likely to be affected thereby on or before thirty days from the date of publication of the above notification.

And whereas the notification was made available to the public on the day of publication;

And whereas no objections/suggestions were received within the stipulated time;

Now, therefore, in exercise of the powers conferred by Section 9, 349 and 355(B) of the Karnataka Municipalities Act 1964, His Excellency, the Governor, hereby notify the 'Grama Panchayat Area' of Ajjampura as Transitional area of Ajjampura mentioned in Schedule-A along with boundaries mentioned in Schedule-B as the "Transitional Area" of Ajjampura and further specifying such area to be the "Town Panchayat Area" of Ajjampura in Chickamagaluru District, having regard to;

i. The population of such area is not less than ten thousand and not more than Twenty thousand; 11,372
ii. The density of population in such area is not less than four hundred inhabitants to one square kilometer of area; 419
iii. The percentage of employment in non-agricultural activities is not less than fifty per cent of the total employment; 70%

By Order and in the name of the
Governor of Karnataka,

**(A. VIJAYAKUMAR)**
**Under Secretary to Government**,
Urban Development Department.

File No:UDD 67 MLR 2017

**Schedule – A**

| District | Taluk | Name of Grama Panchayat | Total Upgraded Area (Square kilometer) |
|---|---|---|---|
| Chikkamagaluru | Ajjampura | Ajjampura Grama Panchayath | 27.13 Sq.KM |

**Schedule - B**

**North:** Erehosuru & Gejjegondanahalli village.

**East:** Gowrapura & Hebburu village.

**South:** Mallenahalli village.

**West:** Athimogge & Hanne village.

**PR-224**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಪೌರ ಸೇವೆಯ ವಿವಿಧ ವೃಂದದ ನೌಕರರುಗಳನ್ನು ಪೌರಾಡಳಿತ ಸೇವೆಯ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದದಲ್ಲಿ ವಿಲೀನಗೊಳಿಸುವ ಕುರಿತು – ಆದೇಶ.

**ಓದಲಾಗಿದೆ:-**
1) ಸರ್ಕಾರದ ಆದೇಶ ಸಂಖ್ಯೆ:ನಅಇ 258 ಇಎಂಸಿ 1994, ದಿನಾಂಕ 9.12.1998.
2) ಸರ್ಕಾರದ ಆದೇಶ ಸಂಖ್ಯೆ:ನಅಇ 34 ಇಎಂಸಿ 2005, ದಿನಾಂಕ 29.7.2005.
3) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಇವರ ಪತ್ರಗಳ ಸಂಖ್ಯೆ.29815:ಡಿಎಂಎ 33 ಕೆಎಂಎಎಸ್ 2019-20 ದಿನಾಂಕ 27.01.2020 ಮತ್ತು ದಿನಾಂಕ: 13.02.2020
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 14.02.2020ರಂದು ನಡೆದ ಸಭೆಯ ನಡವಳಿಗಳು.

**ಪ್ರಸ್ತಾವನೆ:-**

ಪೌರ ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಐದು ವರ್ಷಗಳ ಸೇವೆ ಸಲ್ಲಿಸಿದ ವಿವಿಧ ವೃಂದದ ನೌಕರರನ್ನು ಜ್ಯೇಷ್ಠತೆ ಮತ್ತು ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಿ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದಕ್ಕೆ ವಿಲೀನಗೊಳಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ನಂತರ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದದ ಹುದ್ದೆಗೆಗಳನ್ನು ವಿಲೀನಾತಿ ಮತ್ತು ನೇರ ನೇಮಕಾತಿಯಿಂದ ತುಂಬಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಈ ಕೆಳಕಂಡಂತೆ ಅನುಪಾತವನ್ನು ನಿಗದಿಪಡಿಸಿ ಆದೇಶಿಸಲಾಗಿದೆ:-

| | | | | |
|---|---|---|---|---|
| I | | Direct Recruitment | | 33 1/3 |
| II | | By Absorption | | 66 2/3 |
| | 1 | Managers belongs to Municipal Service | 21.50% | |
| | 2 | Revenue Officers belongs to Municipal Service | 21.50% | |
| | 3 | Senior Health Inspectors belongs to Municipal Service | 21.50% | |
| | 4 | Manager in the office of the Director of Municipal Administration | 2.16% | |

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರಗಳಲ್ಲಿ ರಾಜ್ಯ ಮೂಲ ವೃಂದದಲ್ಲಿ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ-2 ವೃಂದದ 18 ಹುದ್ದೆಗಳು ಖಾಲಿ ಇರುವುದಾಗಿ ತಿಳಿಸಿ, ಪ್ರಸ್ತುತ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ವಿವಿಧ ವೃಂದದಲ್ಲಿ ಐದು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರುವ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದದಲ್ಲಿ ವಿಲೀನಗೊಳಿಸುವಂತೆ ಕೋರಿ ಪೌರ ಸೇವೆಯ ಅರ್ಹ ನೌಕರರುಗಳ ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಪೌರಾಡಳಿತ ಸೇವೆಯ ಮುಖ್ಯಾಧಿಕಾರಿ ಶ್ರೇಣಿ-2 ವೃಂದದಲ್ಲಿ ವಿಲೀನಗೊಳಿಸಲು ವಿವಿಧ ವೃಂದದ ನೌಕರರುಗಳಿಗೆ ಮೀಸಲಿರಿಸಿರುವ /ಲಭ್ಯವಿರುವ ಹುದ್ದೆಗಳು ಮತ್ತು ಅರ್ಹರಿರುವ ನೌಕರರುಗಳ ಮಾಹಿತಿ ಈ ಕೆಳಕಂಡಂತೆ ಇರುತ್ತದೆ;_

| ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ರಲ್ಲಿ ವಿಲೀನಾತಿ ಹೊಂದುವ ವೃಂದದ ವಿವರ | ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ರಲ್ಲಿ ವಿಲೀನಾತಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ | ವಿಲೀನಾತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ನಿಗಧಿತ ಅನುಪಾತ ದಂತೆ ವಿಲೀನಾತಿಗೆ ಲಭ್ಯವಾಗುವ ಹುದ್ದೆಗಳ ಸಂಖ್ಯೆ |
|---|---|---|---|
| ಕಛೇರಿ ವ್ಯವಸ್ಥಾಪಕರು | 25 | 18 | 05 |
| ಕಂದಾಯಾಧಿಕಾರಿ | 25 | 20 | 07 |
| ಹಿರಿಯ ಆರೋಗ್ಯ ನಿರೀಕ್ಷಕರು | 25 | 21 | 04 |
| ನಿರ್ದೇಶನಾಲಯದ ಕಛೇರಿ ವ್ಯವಸ್ಥಾಪಕರು | 02 | 00 | 02 |
| ಒಟ್ಟು | 77 | 59 | 18 |

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪ್ರಸ್ತಾವನೆಯಲ್ಲಿ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ-2 ವೃಂದಕ್ಕೆ ವಿಲೀನಗೊಳಿಸಲು ಕೋರಿರುವ ಅರ್ಹ ನೌಕರರ ವಿವರಗಳು ಈ ಕೆಳಕಂಡಂತಿವೆ:

1) ಕಂದಾಯಾಧಿಕಾರಿ ವೃಂದದ ನೌಕರರ ವಿವರ:

| ಕ್ರಮ ಸಂಖ್ಯೆ | ನೌಕರರ ಹೆಸರು | ಕಂದಾಯಾಧಿಕಾರಿ ಹುದ್ದೆಗೆ ನೇಮಕವಾದ ದಿನಾಂಕ | ಜೇಷ್ಟತಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|
| 1 | ಶ್ರೀಮತಿ ಟಿ. ಲೀಲಾವತಿ | 04.12.2012 | 209 |
| 2 | ಶ್ರೀ ನಾಸಿರ್ ಬಾಷಾ | 04.12.2012 | 210 |
| 3 | ಶ್ರೀ ವಿ ಐ ಬೀಳಗಿ | 15.03.2013 | 212 |
| 4 | ಶ್ರೀ ಹೆಚ್. ಎಸ್ ಚಿತ್ತರಗಿ | 15.03.2013 | 213 |
| 5 | ಶ್ರೀ ಬಿ.ಪಿ. ನಿರುಗ್ಗಿ | 15.03.2013 | 214 |
| 6 | ಶ್ರೀ ಡೊಂಬರ ಎನ್.ಕೆ | 18.05.2013 | 215 |

| | | | |
|---|---|---|---|
| 7 | ಶ್ರೀ ಪರಶುರಾಮ ಎಂ ಚಲವಾದಿ | 11.06.2013 | 216 |

2) ಹಿರಿಯ ಆರೋಗ್ಯ ನಿರೀಕ್ಷಕರ ವೃಂದದ ನೌಕರರ ವಿವರ:

| ಕ್ರಮ ಸಂಖ್ಯೆ | ನೌಕರರ ಹೆಸರು | ಹಿರಿಯ ಆರೋಗ್ಯ ನಿರೀಕ್ಷಕರ ಹುದ್ದೆಗೆ ನೇಮಕವಾದ ದಿನಾಂಕ | ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|
| 1 | ಶ್ರೀ ಪ್ರಕಾಶ ಮರದ್ | 22.10.2011 | 255 |
| 2 | ಶ್ರೀ ಅಭಿಷೇಕ್ ಪಾಂಡೆ | 22.10.2011 | 257 |

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪ್ರಸ್ತಾವನೆಯನ್ನು ಆಧರಿಸಿ ನೌಕರರ ಸೇವಾ ವಿವರಗಳು ಹಾಗೂ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ, ಮೇಲ್ಕಂಡ 9 (ಒಂಬತ್ತು) ಅರ್ಹ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದಕ್ಕೆ ವಿಲೀನಗೊಳಿಸಲು ದಿನಾಂಕ 14.02.2020ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪರಿಶೀಲನಾ ಸಭೆಯ ನಡವಳಿಗಳಲ್ಲಿ ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 18 ಇಎಂಸಿ 2020**

**ಬೆಂಗಳೂರು, ದಿನಾಂಕ 13 .04.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 365(1)(2)(ಎ)ರನ್ವಯ ಪೌರ ಸೇವೆಯ ಕೆಳಕಂಡ ವಿವಿಧ ವೃಂದಗಳ 09(ಒಂಬತ್ತು) ನೌಕರರನ್ನು ತಕ್ಷಣದಿಂದ ಜಾರಿಗೆ ಬರುವಂತೆ, ಕರ್ನಾಟಕ ಪೌರಾಡಳಿತ ಸೇವೆಯ ವೃಂದದ ಅಧಿಕಾರಿಗಳೆಂದು ಪರಿಗಣಿಸಿ, ವೇತನ ಶ್ರೇಣಿ ರೂ.33450-62600ರ ಮುಖ್ಯಾಧಿಕಾರಿ ಶ್ರೇಣಿ-2ರ ಹುದ್ದೆಯಲ್ಲಿ ಸ್ಥಾನಪನ್ನ ಆಧಾರದ ಮೇಲೆ ಅವರು ಪ್ರಸ್ತುತ ಹೊಂದಿರುವ ಹುದ್ದೆಯಲ್ಲಿ ಪಡೆಯುತ್ತಿರುವಂತೆ ವೇತನದ ರಕ್ಷಣೆ ನೀಡಿ, ನಿಯಮಾನುಸಾರ ಸೇವಾ ಸೌಲಭ್ಯಗಳೊಂದಿಗೆ ವಿಲೀನಗೊಳಿಸಿ ಆದೇಶಿಸಿದೆ.

ಕೆಎಂಎಎಸ್ ಅಧಿಕಾರಿಗಳಿಗೆ ಅನ್ವಯವಾಗುವ ಸೇವಾ ನಿಯಮಾವಳಿಗೊಳಪಟ್ಟು ಮತ್ತು ಈ ಆದೇಶದಲ್ಲಿ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು ಅವರುಗಳನ್ನು ಮುಂದಿನ ಆದೇಶದವರೆಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಸಿ ಆದೇಶಿಸಿದೆ.

ಪೌರಾಡಳಿತ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿಗಳು ಶ್ರೇಣಿ-2 ವೃಂದಕ್ಕೆ ವಿಲೀನಗೊಳಿಸಿರುವ ನೌಕರರ ವಿವರಗಳು:-

| ಕ್ರ ಸಂ | ನೌಕರರ ಹೆಸರು | 2019ಕ್ಕೆ ಇರುವಂತೆ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ | ವೃಂದ ವಿಭಾಗ |
|---|---|---|---|
| 1. | ಶ್ರೀಮತಿ ಟಿ. ಲೀಲಾವತಿ | 209 | ಕಂದಾಯಾಧಿಕಾರಿ ವೃಂದ |
| 2. | ಶ್ರೀ ನಾಸಿರ್ ಬಾಷಾ | 210 | |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | |
|---|---|---|---|
| 3. | ಶ್ರೀ ವಿ ಐ ಬೀಳಗಿ | 212 | |
| 4. | ಶ್ರೀ ಹೆಚ್. ಎಸ್ ಚಿತ್ತರಗಿ | 213 | |
| 5. | ಶ್ರೀ ಬಿ.ಪಿ. ನಿರುಗ್ಗಿ | 214 | |
| 6. | ಶ್ರೀ ಡೊಂಬರ ಎನ್.ಕೆ | 215 | |
| 7. | ಶ್ರೀ ಪರಶುರಾಮ ಎಂ ಚಲವಾದಿ | 216 | |
| 8. | ಶ್ರೀ ಪ್ರಕಾಶ ಮರದ್ | 255 | ಹಿರಿಯ ಆರೋಗ್ಯ ನಿರೀಕ್ಷಕ ವೃಂದ |
| 9. | ಶ್ರೀ ಅಭಿಷೇಕ್ ಪಾಂಡೆ | 257 | |

ಷರತ್ತುಗಳು:

1) ಈ ಮೇಲ್ಕಂಡ ನೌಕರರುಗಳು ಸರ್ಕಾರದ ಆದೇಶ ಸಂಖ್ಯೆ:ನ ಅ ಇ 258 ಇಎಂಸಿ 94, ದಿನಾಂಕ 09.12.1998 ರಲ್ಲಿ ತಿಳಿಸಿರುವಂತೆ ಮುಖ್ಯಾಧಿಕಾರಿ ಶ್ರೇಣಿ-2 ಹುದ್ದೆಗೆ ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಮುಖ್ಯಾಧಿಕಾರಿ ಶ್ರೇಣಿ-2 ಹುದ್ದೆಯಲ್ಲಿ ವಿಲೀನಗೊಳಿಸಿದ / ಈ ಆದೇಶ ಹೊರಡಿಸಿದ ದಿನಾಂಕದಿಂದ ಎರಡು ವರ್ಷದೊಳಗಾಗಿ ಉತ್ತೀರ್ಣರಾಗತಕ್ಕದ್ದು.

2) ಮೇಲ್ಕಂಡ ಒಟ್ಟು ಎರಡು ವೃಂದಗಳಲ್ಲಿ ವಿಲೀನಗೊಂಡಿರುವ ನೌಕರರುಗಳ ವಿರುದ್ಧ ಅಧೀನ ಕಛೇರಿಗಳಲ್ಲಿ ದಿನಾಂಕ 14.02.2020ರ ಅವಧಿಯೊಳಗೆ ಯಾವುದಾದರೂ ಇಲಾಖಾ ವಿಚಾರಣೆ ಹೂಡಿರುವುದು ಕಂಡು ಬಂದಲ್ಲಿ ಸದರಿಯವರ ವಿಲೀನಾತಿಯನ್ನು ರದ್ದುಗೊಳಿಸಲಾಗುವುದು ಅಥವಾ ಹಿಂಪಡೆಯಲಾಗುವುದು.

3) ಈ ಆದೇಶದಲ್ಲಿ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ-2 ವೃಂದಕ್ಕೆ ವಿಲೀನಗೊಳಿಸಿರುವ ನೌಕರರುಗಳಿಗೆ ರಾಜ್ಯದ ಪಟ್ಟಣ ಪಂಚಾಯತಿ/ಪುರಸಭೆಗಳಲ್ಲಿ ಮುಖ್ಯಾಧಿಕಾರಿ ಹುದ್ದೆಗಳಿಗೆ ನೇಮಕಗೊಳಿಸುವ ಸಂದರ್ಭದಲ್ಲಿ ಪೌರಾಡಳಿತ ನಿರ್ದೇಶಕರು ಸರ್ಕಾರದೊಂದಿಗೆ ಸಮಾಲೋಚಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎ.ವಿಜಯಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

**PR-225**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೯.

SUNIL GARDE